ವಕೀಲರ ಬರುವಿಕೆಗೂ ಕಾಯದೇ ಅವರು ಹಾಸಿಗೆ ಹಿಡಿದಿದ್ದರು. ಮೂರು ತಿಂಗಳು ಮಲಗಿದರು. ಶ್ರದ್ಧೆಯಿಂದ ಸೇವೆ ಮಾಡುತ್ತಿದ್ದೆ. ಕೊನೆಗೊಂದು ದಿನ ನನ್ನ ತಲೆಯ ಮೇಲೆ ಕೈ ಇಡುತ್ತ, "ದೇವರು ಹ್ಯಾಂಗರೆ ನಿನ್ನ ದಡಾ ಸೇರಸ್ಲಿ" ಎನ್ನುತ್ತ ಪ್ರಾಣ ಬಿಟ್ಟರು. ಹುಲಿಯ ದರ್ಬಾರು ಮುಗಿದಿತ್ತು. ಇನ್ನೆಲ್ಲ ತಮ್ಮದೇ ಎನ್ನುವ ಆನಂದ, ನಿರಾಳತೆ ರಾಧಾವ್ವನಿಗೆ. ಹೇಗೋ... ಅಲ್ಲಿಗೆ ಒಂದು ಅಧ್ಯಾಯವೇ ಮುಗಿದಂತಾಗಿತ್ತು.

ಅಪ್ಪನ ಕಾರ್ಯಕ್ಕೆ ಬಂದ ಶ್ರೀವತ್ಸ ಮಾತು ತೆಗೆದಿದ್ದ. ಹೆಂಡತಿ ಉದ್ಯೋಗಸ್ಥೆ. ಎಳೆ ಬಸುರಿ ಬೇರೆ. ತನ್ನಮ್ಮನ್ನು ಜೊತೆಗೆ ಕರೆದೊಯ್ಯುವ ಇಚ್ಛೆ ವ್ಯಕ್ತಪಡಿಸಿದ್ದ. ರಮಾವ್ವನಿ, "ರುಕ್ಕೂನ್ನೂ ಕರಕೊಂಡ್ಹೋಗೋಣು" ಎಂದಿದ್ದರು. ಶ್ರೀವತ್ಸ, "ಅಮ್ಮಾ, ಈಗಿರೋದು ಸಣ್ಣ ಮನಿ. ಧೊಡ್ಡದು ಹಿಡದ ಮ್ಯಾಲೆ ನೋಡಿದ್ರಾತು. ಅಲ್ಲದ ಅಕಿನ್ನೂ ಒಂದ ಮಾತು ಕೇಳಬೇಕಲಾ?" ಎಂದಿದ್ದ. ಸೂಕ್ಷ್ಮವನ್ನು ಅರ್ಥ ಮಾಡಿಕೊಂಡು ನಾನೇ, "ವೈನಿ, ನೀವು ಮುಂದ ಹೋಗ್ರಿ. ಆಮ್ಯಾಲೆ ನಾ ಬರ್ತೇನಂತ. ಹಂಗ ನಾ ಇಲ್ಲಿಂದ ಕಾಲು ಹೊರಗ ತಗದ್ರ ಮತ್ತ ತಿರಗಿ ಈ ಮನ್ಯಾಗ ಜಾಗಾ ಸಿಗ್ತದಿಲ್ಲೋ ಗೊತ್ತಿಲ್ಲ" ಎಂದು ಸಂತೈಸಿದ್ದೆ. ಆದರೂ ಮನ ಭಾರವಾಗಿತ್ತು. ನಾನೇ ಬೆಳೆಸಿದ ಮಕ್ಕಳು. ನಾನೀಗ ಅವರಿಗೆ ಬೇಡವಾದ ವಸ್ತುವಾಗಿದ್ದೆ. ಅವರು ಅಳುತ್ತಲೇ ನನ್ನನ್ನು ತಬ್ಬಿಕೊಂಡಿದ್ದರು. ಅಷ್ಟಕ್ಕೇ ನಿಲ್ಲದೇ ಪಾಲಿನ ಮಾತೂ ಬಂದಿತ್ತು. "ಇನ್ನ ನಾವಷ್ಟ ದುಡೀಬೇಕು ಇಲ್ಲೆ. ಹೆಂಗೂ ಎಲ್ಲಾರೂ ಕೂಡ್ಯಾರ. ಹಿಸ್ಸೇ... ಪಾಲಾಪಟ್ಟಿ ಮಾಡಿಬಿಡ್ರಿ" ಎಂದರು ರಾಧಾವ್ವನಿ. ಕೇಶಣ್ಣ, "ಈಗ ಬ್ಯಾಡ. ವರ್ಷಾಂತಕದ ಹೊತ್ತಿಗೆ ನೋಡಿದ್ರಾತು" ಎಂದು ಮುಂದೂಡಲು ನೋಡಿದ. ಪಟ್ಟು ಬಿಡದೇ ವೈನಿ ತಮ್ಮ ಅಣ್ಣಂದಿರನ್ನು ಕರೆಸಿಯೇಬಿಟ್ಟರು. ಶ್ರೀವತ್ಸನೂ, "ಮತ್ತ ಮತ್ತ ಬೆಂಗಳೂರಿನಿಂದ ಬರ್ಲಿಕ್ಕಾಗೂದುಲ್ಲ. ಮಾಡಿ ಮುಗಿಸಿಬಿಡ್ರಿ" ಎಂದಿದ್ದ. ಅವನಿಗೆ ಶಾಸ್ತ್ರಕ್ಕೊಂದಿಷ್ಟು ದುಡ್ಡು ಕೊಟ್ಟಂತೆ ಮಾಡಿ ಎಲ್ಲವನ್ನೂ ತೆಗೆದುಕೊಂಡುಬಿಟ್ಟರು. ಹೆಣ್ಣುಮಕ್ಕಳ ಬಗ್ಗೆ ಮಾತಿಲ್ಲ. ಅವರಾರಿಗೂ ಕವಡೆಕಾಸೂ ಸಿಕ್ಕಿರಲಿಲ್ಲ. ಅಕ್ಕಂದಿರು ಕೊಸಕೊಸ ಅಂದರೂ, "ಅವ್ವ, ಅಪ್ಪ ಇಲ್ಲದ ಮ್ಯಾಲೆ ಮುಗೀತು" ಎಂದು ಮೌನವಾದರು. ರಮಾವ್ವನಿಗೆ ಕಡಿಮೆಯಾಗಿ ಅನ್ಯಾಯವಾಗಿದ್ದರೂ "ಧೊಡ್ಡ ಆಸ್ತಿ... ನನ್ನ ಗಂಡನ ಇಲ್ಲ. ಈ ಆಸ್ತಿ ತೊಗೊಂಡು ಏನ ಮಾಡ್ಲಿ?" ಎಂದುಬಿಟ್ಟರು. ಬೇರು ಬಿಟ್ಟು ಬಾಳಿದ ಮನೆಯೊಂದು ಛಿದ್ರಛಿದ್ರವಾಗಿತ್ತು.



ಮುಂದೆ ದಿನಗಳು ಹೇಗೆ ಕಳೆದವೋ ಗೊತ್ತಿಲ್ಲ. ನಾನು ಬಹುಶಃ ಕಿವುಡಾಗಿರುತ್ತಿದ್ದೆ. ಕೈಕಾಲು ಸೋಲುವವರೆಗೂ ಕೆಲಸ ಮಾಡುತ್ತಿದ್ದೆ. ವೈನಿಯನ್ನು ಸುಮ್ಮನಿರಿಸಲು, ಸಂತುಷ್ಟಗೊಳಿಸಲು ಅದೊಂದೇ ಉಪಾಯ ಉಳಿದಿತ್ತು. ಅವರೆಂದೂ ಮೈಮುರಿದು ಕೆಲಸ ಮಾಡಿದವರಲ್ಲ. ಅಡಿಕೆ ಹೋಳು ಬಾಯಿಗೆಸೆದುಕೊಳ್ಳುತ್ತ ಚಾವಡಿಯಲ್ಲಿ ಅಪ್ಪನ ಜಾಗದಲ್ಲಿ ಕುಳಿತು ಹಿರೇತನ ಮಾಡಿದ್ದೇ ಬಂತು. ಕೇಶಣ್ಣನಿಗೂ ಕಷ್ಟವೇ. ಅಪ್ಪ, ದೊಡ್ಡಣ್ಣ ಇದ್ದಾಗ ಆಳುಗಳು ಮರ್ಯಾದೆ ಕೊಡುತ್ತಿದ್ದರು. ವಿಶ್ವಾಸದಿಂದ ಕೆಲಸ ಮಾಡುತ್ತಿದ್ದರು. ಈಗ ಅವರನ್ನು ನಿಭಾಯಿಸಲು ಕೇಶಣ್ಣನಿಂದ ಸಾಧ್ಯವಿರಲಿಲ್ಲ. ಅವರ ಮಕ್ಕಳು ಮನೋಜ, ಪದ್ಮನಿಗೆ ಈ ಹಳ್ಳಿ ಗಲಾಟೆಯೇ ಬೇಡ. ಎಲ್ಲ ಮಾರಿ ಶಹರಕ್ಕೆ ಹೋಗಿ ಸುಖವಾಗಿರುವಾಸೆ. ನೌಕರಸ್ಥರಾಗಿ ತಿಂಗಳು ತಿಂಗಳೂ ಪಗಾರ ತರಬೇಕು. ಭೂಮಿಯನ್ನು ನಂಬಿ ಮೈಮುರಿದು ದುಡಿಯುವ ತಂಟೆಯೇ ಬೇಡವಾಗಿತ್ತು. ದಿನಗಳು ಹಾಗೆಯೇ ಓಡುತ್ತಿರುವಾಗ ಬರಸಿಡಿಲಿನಂತೆ ಈ ಸುದ್ದಿ ಬಂದಿತ್ತು. ಅಂದು ಗುರುವಾರ ಸಂಜೆ ರಾಧಾವ್ವನಿ ಇಷ್ಟಗಲ ಮುಖ ಮಾಡಿಕೊಂಡು ನಗುತ್ತ ಬಂದು, "ರುಕ್ಕೀ... ನಿನ್ನ ನಶೀಬ ತಗಿತ. ಅಳ್ಳಂದ್ರು ಕೃಷ್ಣಾಜಿ ಬಂದಾರಂತ. ರಾಯಕರ ಅವರ ಮನ್ಯಾಗ ಇಳಕೊಂಡಾರಂತ. ನಾಳೆ ನಮ್ಮನೀಗೆ ಬರ್ತಾರಂತ. ಬರ್ಲಿ ಬಿಡು. ಹೆಂಗೂ ಇವತ್ತ ಅಮಾಶಿ. ನಾಳೆ ಬರ್ಲಿ" ಎಂದು ಸಂಭ್ರಮದಿಂದಲೇ ತಿಳಿಸಿದರು. ನನ್ನ ಜೀವ